## ತಿರುಗುಬಾಣ



ಒಮ್ಮೆ ಚೆನ್ನೈ ವಿಮಾನ ನಿಲ್ದಾಣದಲ್ಲಿ ಒಬ್ಬ ಪ್ರಯಾಣಿಕ ಲಗೇಜ್ ಚೆಕ್ ಮಾಡುವ ಸಿಬ್ಬಂದಿಯ ಹತ್ತಿರ ಅನವಶ್ಯಕವಾಗಿ ಜಗಳ ಮಾಡುತ್ತಿದ್ದ. ಆತ, 'ಮ್ಯಾನೇಜರ್ ಹತ್ತಿರ ಹೋಗಿ ವಿಚಾರಿಸಿ ಸರ್' ಎಂದು ವಿನಯಪೂರ್ವಕವಾಗಿ ಹೇಳುತ್ತಿದ್ದ. ಆದರೂ ಕೇಳದೆ, 'ನೀನೇ ಹೋಗಿ ಕೇಳು, ನಾನ್ಯಾಕೆ ಹೋಗಲಿ?' ಎಂದು ಏಕವಚನದಲ್ಲಿ ತರಾಟೆಗೆ ತೆಗೆದುಕೊಂಡ. ನಗುಮೊಗದಿಂದಲೇ ಅವನು ತನ್ನ ಕೆಲಸ ತಾನು ಮಾಡುತ್ತಿದ್ದ. ಇದನ್ನು ಗಮನಿಸುತ್ತ ನಿಂತಿದ್ದ ನನಗೆ ಈ ನೌಕರನ ತಾಳ್ಮೆ ಕಂಡು ಆಶ್ಚರ್ಯವಾಯ್ತು. ಜಗಳ ಮಾಡಿದ ಪ್ರಯಾಣಿಕ ಹೋದ ನಂತರ ಕೇಳಿದೆ, 'ಏನಪ್ಪಾ, ಅವರು ಅಷ್ಟು ಜೋರು ಮಾಡಿದರೂ ನೀನು ಮಾತ್ರ ಒಂದು ಮಾತೂ ಆಡದೇ ನಿನ್ನ ಕೆಲಸ ನೀನು ಮಾಡುತ್ತಾ ಇದ್ದೆಯಲ್ಲ?' ಆತ ಉತ್ತರಿಸಿದ, 'ಇಂಥವರಿಗೆಲ್ಲಾ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದನ್ನು ನಮಗೆ ನಮ್ಮ ಅನುಭವವೇ ಕಲಿಸಿಕೊಟ್ಟಿರುತ್ತದೆ ಸರ್. ಈಗ ನೋಡಿ, ಆ ಮನುಷ್ಯ ಜಪಾನ್ ವಿಮಾನ ಏರುತ್ತಾನೆ ಮತ್ತು ಅವನ ಲಗೇಜ್ ಅಮೆರಿಕಕ್ಕೆ ಹೋಗುತ್ತದೆ'. ಅವನ ಉತ್ತರಕ್ಕೆ ನಾನು ಕಣ್ಣರಳಿಸಿದೆ!

**ಮುರಳಿ, ನಾಗವಾರ**

## ಹಿರೇಕಾಯಿ ಚಟ್ನಿ



ಕಲೆ: ಗಣೇಶ ಆಚಾರ್ಯ

ಆಗಿನ್ನೂ ನಮ್ಮ ಮನೆಗಳಿಗೆ ಟೀವಿ ಬಂದಿರಲಿಲ್ಲ. ರೇಡಿಯೊ ಮಾತ್ರ ಇರುತ್ತಿತ್ತು. ಒಂದು ದಿನ ರೇಡಿಯೊದಲ್ಲಿ ಹೀರೆಕಾಯಿ ಸಿಪ್ಪೆಯ ಚಟ್ನಿ ಮಾಡುವುದು ಹೇಗೆ ಎಂಬುದನ್ನು ಹೇಳಿದ್ದರು. ಸರಿ, ಅದಕ್ಕೆ ಬೇಕಾದ ಎಲ್ಲವನ್ನೂ ತಂದು ಅಚ್ಚುಕಟ್ಟಾಗಿ ಚಟ್ನಿ ಮಾಡಲಾಯ್ತು. ಎಲ್ಲರೂ ಎರಡೆರಡು ಬಾರಿ ತಿಂದಿದ್ದಾಯ್ತು. ವಿಷಯ ಇಷ್ಟಕ್ಕೆ ಮುಗಿಯಲಿಲ್ಲ. ಮಾರನೆಯ ದಿನ ಬೀದಿ ಕಸ ಗುಡಿಸುವ ಕೆಲಸಗಾರರಿಗೆ ಕಸದ ತೊಟ್ಟಿಯಲ್ಲಿ ಟ್ಯೂಬ್‌ಲೈಟ್ ಥರ ಹೊಳೆಯುವ ಸಿಪ್ಪೆ ತೆಗೆಸಿಕೊಂಡ ಸಾಕಷ್ಟು ಹೀರೆಕಾಯಿಗಳು ಸಿಕ್ಕವು!

**ಗಂಜಾಂ ನಾಗರಾಜ್**